140 (2)

Regd No BG 155

— ಶ್ರೀ —

18—4—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ ವ ಎಷ್ಟ್ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅಂಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಭಾರತದ ವಿರುದ್ಧ ನೇಪಾಳದಲ್ಲಿ ಪ್ರಕಟಣೆ

ಭಾರತದ ವಿರುದ್ಧ ಆಕ್ಷೇಪಣೆಗಳ ನ್ನೊಳಗೊಂಡ ಅಧಿಕೃತ ಪತ್ರವನ್ನು ನೇ ಪಾಳ ಸರ್ಕಾರ ನಿನ್ನೆ ಪ್ರಕಟಿಸಿರುವದು ನವ ದೆಹಲಿಯಲ್ಲಿ ಆಶ್ಚರ್ಯವನ್ನುಂಟು ಮಾಡಿದೆ. ದೊರೆ ಮಹೇಂದ್ರರು ಭಾರ ತಕ್ಕೆ ಭೇಟಿಕೊಡುವ ಸಂದರ್ಭದಲ್ಲಿ ಈ ಪ್ರಕಟಣೆ ಹೊಂಟಿರುವದು ಆಶ್ಚರ್ಯಕ್ಕೆ ಕಾರಣ ಈ ಪ್ರಕಟಣೆಗೆ ಯಾರು ಜ ವಾಬ್ದಾರರೆಂಬುದು ಗೊತ್ತಾಗಿಲ್ಲ

ಯೋಜನಾ ಸಮಿತಿ ಸೂಚನೆ

ಅಪೇಕ್ಷಿಸಿರವಷ್ಟು ಉದ್ಯೋಗಾವ ಕಾಶ ಕಲ್ಪಿಸಲು ಮತ್ತು ಆದಾಯವನ್ನು ಹೆಚ್ಚಿಸಲು ವ್ಯವಸಾಯ—ಕೈಗಾರಿಕೆ ಅ ಭಿವೃದ್ಧಿಗೆ ಕೆಲವು ಸ್ಕೀಂಗಳನ್ನು ರಚಿಸ ಬೇಕೆಂದು ಯೋಜನಾ ಸಮಿತಿ ರಾಜ್ಯ ಗಳಿಗೆ ತಿಳಿಸಿದೆ ಎಂದು ಪಾಟ್ನ ವಾರ್ತೆ. ಇದಕ್ಕಾಗಿ ಹೊಂದಿಸಿರುವ ರೂ 225 ಕೋಟಿಗಳನ್ನು ಪೂರ್ಣ ವೆಚ್ಚ ಮಾಡು ವಂತೆ ಅದು ಸೂಚಿಸಿದೆ.

ದೊರೆ ಮಹೇಂದ್ರರು

ಪುನಃ ನೆಹರೂರೊಡನೆ ಮಾತುಕತೆಗಾಗಿ ನೇಪಾಳ ದೊರೆ ಮಹೇಂದ್ರರು ಈ ದಿನ ದೆಹಲಿಗೆ ಬರುವರು.

ರಷ್ಯಾಗಲಿ

ಮೈಸೂರಾ ರಾಜಕೀಯದಲ್ಲಿ ತೀರ್ಥ ಪ್ರವಾಸದ ವ್ಯವಹಾರಗಳು ವಿಧಾನ ಸಭೆ ವಿಸರ್ಜಿತವಾಗುವಂತೆ ಒತ್ತಾಯ ಮಾಡು ತ್ತಿದೆ ಎಂದು ಪಿಎಸ್ಪಿ ನಾಯಕ ಶ್ರೀ ಬಿ. ಈ ಪುಟ್ಟಸ್ವಾಮಯ್ಯನವರು ನಿನ್ನೆ ದೆಂಗ ಳೂರಿನಲ್ಲಿ ನ ಡಿದರು.

× ಇತ್ತೀ ಚ್ಯದೆಶದಲ್ಲಿ 5 ತಿಂಗಳಲ್ಲಿ 600 ಜನರು ಸಿಡಿಬಿನಿಂದ ಸತ್ತಿದ್ದಾರೆಂಬ ವಾರ್ತೆ ಲಕತ್ತಾದಿಂದ ಬಂದಿದೆ.

ಸಾಂಕೇತಿಕ ಸತ್ಯಾಗ್ರಹ

ಕಾನೂನಿನಲ್ಲಿ ವಿತಿ ಇರುವವರಿಗೆ ಸ್ವಂತ ವ್ಯವಸಾಯಕ್ಕೆ ಭೂಮಿ ಪಡೆಯ ಲು ಅವಕಾಶ ಮಾಡಿ ತಿದ್ದುಪಡಿಮಾಡ ಬೇಕೆಂದು ಕೇರಳದ ಸಣ್ಣ ಮತ್ತು ಭಾರ ಭೂ ಮಾಲೀಕರು ಸತ್ಯಾಗ್ರಹ ಹೂಡು ವರೆಂದು ಕೇರಳ ವ್ಯವಸಾಯ ಗಾರರ ಸಂ ಘದ ಕಾರ್ಯದರ್ಶಿ ಶ್ರೀ ಜೋಸೆಫ್ ಪೆಟ್ಟಕರ್ದ ನಿನ್ನೆ ಎರ್ನಾಕುಲಂನಲ್ಲಿ ತಿಳಿ ಸಿದ್ದಾರೆ

ತರಗತಿಗಳ ಬಂದ್

ನಿನ್ನೆಯಿಂದ ಮೆ31ರ ವರೆಗೆ ವಿಶ್ವವಿ ದ್ಯಾನಿಲಯದ ಸರ್ವ ತರಗತಿಗಳನ್ನು ರದ್ದುಮಾಡುವತೀರ್ಮಾನವನ್ನು ಡಾಕ್ಕ ವಿಶ್ವವಿದ್ಯಾನಿಲಯ ಅಂಗೀಕರಿಸಿತು ಕೆಲ ಘಟನೆಗಳು ನಡೆದುದು ಇದಕ್ಕೆ ಕಾರಣ

ಅವಿರೋಧ ಆಯ್ಕೆ

ಲೋಕಸಭೆಯ ಸ್ಪೀಕರರಾಗಿ ಶ್ರೀ ಹುಕುಂ ಸಿಂಗರು ನಿನ್ನೆ ಸರ್ವಾನುಮತ ದಿಂದ ಪುನರಾಯ ತರಾದರೆಂದು ನವದೆಹಲಿ ವಾರ್ತೆ.

ರಾಜೀನಾಮೆ

ಬಾಗಲ್ಕೋಟೆ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆ ಆಗಿರುವ ಶ್ರೀ ಬಿ. ಟಿ. ಪಟ್ಟಣಶೆಟ್ಟಿ ತಮ್ಮ ಸ್ಥಾನಕ್ಕೆ ರಾಜೀ ನಾಮೆ ಕೊಟ್ಟಿರುವರೆಂದು ಬಿಜಾಪುರ ದಿಂದ ಬಂದ ವಾರ್ತೆ ತಿಳಿಸುತ್ತದೆ ಪ್ರ ದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಚುನಾವಣೆಗೆ ಸ್ಪರ್ಧಿಸಲು ಅವಕಾಶ ಮಾಡಲು ಈ ರಾಜೀನಾಮೆ. ಜೂನ್ ಮೊದಲನೆಯ ವಾರ ಚುನಾವಣೆ ನಡೆಯುವದೆಂದು ಗೊತ್ತಾಗಿದೆ.

ಕ್ಯಾ|| ರಾಮಸ್ವಾಮಿಯವರ ಮರಣ

ದಿನಾಂಕ 7—4—1962 ರಂದು ಮುನಿ ಸ್ವಾಮಿ ಎಂಬ 386 ನೆಯ ನಂಬರಿನ ಕಾ ನಸ್ಟೆಬಲನು ಬೀದರಿನ ಎಂ ಎಸ್ ಆರ್ ಪಿ ಯ ಅಸಿಸ್ಟೆಂಟು ಕಮ್ಯಾಂಡೆಂಟು ಕ್ಯಾ ಪ್ಟ ಬಿ ಎಸ್ ರಾಮಸ್ವಾಮಿಯವರ ಮನೆಯಲ್ಲಿ ಒಂದು ಪೆಟ್ರೋಲು ಡಬ್ಬದ ಹತ್ತಿರ ದೀಪ ಹಚ್ಚಿದ ಕಂದೀಲನ್ನು ತೆಗೆ ದುಕೊಂಡು ಹೋದನು : ಅದರ ಪರಿ ಣಾಮವಾಗಿ ಪೆಟ್ರೋಲಿಗೆ ಉರಿಹತ್ತಿತು; ಅದನ್ನು ನೋಡಿ ಕಾನಸ್ಟೆಬಲನ್ನು ರಕ್ಷಿ ಸಲು ಶ್ರೀ ರಾಮಸ್ವಾಮಿಯವರು ಕೋ ಣೆಯೊಳಗೆ ಧಾವಿಸಿದರು : ಆದರೆ ಅವರೇ ಉರಿಯಲ್ಲಿ ಸಿಕ್ಕಿಬಿದ್ದುದರಿಂದ ಅವರ ದೇಹವೆಲ್ಲ ಭಯಂಕರವಾಗಿ ಸುಟ್ಟುಹೋ ಯಿತ : ಕಾನಸ್ಟೆಬಲಿನ ಕಾಲುಗಳೂ ಮತ್ತು ಕೈಗಳೂ ಕೂಡ ಸುಟ್ಟು ಗಾಯ ಗಳಾದವು : ಅವರಿಬ್ಬರನ್ನೂ ಬೀದರಿನ ಸಿವಿಲ್ ಆಸ್ಪತ್ರೆಯಲ್ಲಿ ದಾಖಲ್ಮಾಡಲಾ ಯಿತು — ಶ್ರೀ ರಾಮಸ್ವಾಮಿಯವರು ಮಧ್ಯಾಹ್ನ 12—30 ಗಂಟೆಗೆ ಆಸ್ಪತ್ರೆಯ ಲ್ಲಿ ಸತ್ತರೆಂದು ಏಪ್ರಿಲ್ 13 ರಂದು ಬೀ ದರಿನ ಪೋಲೀಸು ಸೂಪರಿಂಟೆಂಡೆಂಟರಿಂ ದ ಸಮಾಚಾರ ಬಂದಿತ — ಅವರ ಸತ್ಕ ಸುದ್ದಿಯನ್ನು ಕೇಳಿ ಪೋಲೀಸು ಇನ್ಸ್ಪೆಕ್ಟರ್ ಜನರಲ್ಲರು, ತಮ್ಮ ವರು ಪೋಲೀಸು ದಳದ ಪರವಾಗಿ ವ್ಯಕ್ತಂ ಕುಟುಂಬದವರಿಗೆ ಸಂತಾಪ ಸೂಚಕ ಸಂ ದೇಶವನ್ನು ಕಳಿಸಿದರು — ಸಂಪೂರ್ಣ ಪೋಲೀಸು ಗೌರವದೊಂದಿಗೆ ಅವರ ಶವಸಂಸ್ಕಾರ ಯಾತ್ರೆಯು ಏಪ್ರಿಲ್ 16 ರಂದು ಮಾಡಲಾಯಿತು

ನಾಳೆಯ ಪಂಚಾಂಗ

ಅನಂತ ಮಹಾವಿದ್ವಾನ್ ದೈವಜ್ಞ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪಕ್ಕಿಷ್ಣ ಜೋಯಿಸರಿಂದ

19 ಪೂರ್ಣಿಮಾ ಚಿತ್ತ

೦೦೦

ಕೆನಿಗಾದ ನಕರಣವಿನಲ್ಲಿ ಪೋಲಿ ಸ್ಸ ನಾಯಿಯನ್ನು ಇರಿದ ಪಿರ್ಸ ಆಫ್ರಿಕ ನಿಗೆ ಪ್ರವಾಜಿಸ್ಟ್ರೇಟರಾದ ನೆಲ್ಲಂರು 3 ವರ್ಷಗಳ ಸಜೆ ವಿಧಿಸಿದರು.

ವಿವಿಧ ವಿಷಯಗಳು

ಅಹಮದಾಬಾದಿನ ಪೋಲೀಸರು ನಿನ್ನೆ ರಸ್ತೆಯಲ್ಲಿದ್ದ ಕೆಲವು ಪೋಲಿ ದನ ಗಳನ್ನು ಪಾಂಜರಪೋಲಿಗೆ ಕೊಡಲು ತೆಗೆ ದುಕೊಂಡು ಹೋಗುತ್ತಿದ್ದಾಗ ಕೆಲವು ವಲ್ಲಾರಿಗಳು ಅವರನ್ನು ತಡೆದು ದನ ಗಳನ್ನು ಬಿಡುವಂತೆ ಒತ್ತಾಯ ಮಾಡಿ ದರು. ಅವರು ಬಿಡದಿರಲು ಶಹಿಪುರ ಜಾಕಿಯಾ ಪೋಲೀಸ್ ಠಾಣೆಯ ಮೇಲೆ ಗುಂಪೊಂದು ಕಲ್ಲು ಮತ್ತು ಲಾಠಿಗಳ ಸಮೇತ ಆಕ್ರಮಣ ಮಾಡಿತು ಗುಂಪು ಚದುರಿಸಲು ಪೋಲೀಸರು ಒಂದು ಸುತ್ತು ಆಶ್ರುವಾಯು ಪ್ರಯೋಗಿಸಿದರು.

★

ನವದೆಹಲಿ 17 — ಲೋಕಸಭೆಯ ಕಾರ್ಯಕ್ರಮ ಪಟ್ಟಿಯಲ್ಲಿನ ಒಂದು ಮಸೂದೆಯ ಪ್ರಕಾರ ನಾಗಾ ರಾಜ್ಯ ವನ್ನು ಭಾರತದ 16ನೇ ರಾಜ್ಯವನ್ನಾಗಿ ಪರಿಗಣಿಸಲಾಗುವುದು ; ರಾಜ್ಯಾಂಗದಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡುವುದರ ಮೂಲಕ ಈ ಹೊಸ ರಾಜ್ಯ ಸ್ಥಾಪನೆಗೆ ಅವಶ್ಯಕವಾದ ಅಧಿಕಾರಗಳನ್ನು ರಾಷ್ಟ್ರ ಪತಿಗಳಿಗೆ ನೀಡಲಾಗುವುದು.

★

ರೆವಿನ್ಯೂ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ರಾಜೀನಾಮೆ ನೀಡಿರುವ ದರಿಂದ ಖಾಲಿ ಆದ ಲೋಕಸಭೆ ಸ್ಥಾನಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಪ್ರಜಾ ಸೋಷಲಿಸ್ಟ್ ಪಕ್ಷದ ನೈಸೂ ರು ಸಮಿತಿ ಶ್ರೀ ಅಶೋಕ ಮೆಹತಾರಿಗೆ ಅಹ್ವಾನಿಸಿದೆ ಮೆಹತಾರವರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡಿ ರುವರು.

★

ನವದೆಹಲಿ 17— ಭಾರತದಲ್ಲಿ ಕಯಾ ರಾದ ವಸ್ತುಗಳ ಪ್ರದರ್ಶನವೊಂದು ಏಪ್ರಿ ಲ್ 11 ರಂದು ಸಿಡ್ನಿಯಲ್ಲಿನ ಭಾರಿ ಅಂ ಗಡಿಯೊಂದರಲ್ಲಿ ಪ್ರಾರಂಭವಾಯಿತು.

★

ನವದೆಹಲಿ 17 — ಭಾರತದಲ್ಲಿ ಒಟ್ಟು ಶಕುವಾಣಿ ಸಂಪತ್ತು 336-53 ದಶಲಕ್ಷವೆಂದು 1961 ರ ತಾತ್ಕಾಲಿಕ ಅಂದಾಜಿನಿಂದ ತೀರ್ಮಾನಿಸಲಾಗಿದೆ

ಇಂದಿನ ಜಪಾನೀ ಸ್ತ್ರೀಯರು

(ಮುಂದುವರಿದುದು)

1947 ರ ಮೇಕ್'ಆರ್ಥರ ರಾಜ್ಯಾಂಗವು ಮಹಿಳೆಯರಿಗೆ ಸರಿಸಮಾನ ಹಕ್ಕನ್ನು ಮಾತ್ರ ಶಾಸನಬದ್ಧವಾಗಿ ಇತ್ತಿತು ; ಆ ಹಕ್ಕುಗಳನ್ನೆಲ್ಲಾ ಕಲಿತು, ಕೇಳಿ ಪಡೆಯಿತು.

ವಿಲಿಯಂರು ಡಿಯೆಟ್ (ಪಾರ್ಲಿಮೆಂಟು) ವೇಲೆ ನುಗ್ಗಿ ಪೋಲೀಸರೊಂದಿಗೆ ಹೊಡೆದಾಡಿ ಒಳ್ಳೇ ಶಿಸ್ತು ಅನುಸರಿಸಿ ' ಮಹಿಳೆಯರು ಮಾತ್ರ ' ಮೃಷ್ಯಂಗಳನ್ನು ನಡೆಸಿದಾರೆ ; ನಗರದ ಇಲಾಖೆಗಳ ದಾಸಾನು ಸ್ಥಳಗಳಲ್ಲಿ ಪಾರ್ಸೆಲ್ಲುಗಳನ್ನು ಹೊರುವುದು, ಮಕ್ಕಳನ್ನು ಜೆನ್ನು ಹಿಂದೆ ಎತ್ತಿಕೊಂಡು ಹೋಗುವುದು ವಿಂತಾದುವುಗಳನ್ನು ಹೆಂಗಸರು ಗಂಡಸರಿಂದ ಮಾಡಿಸುತ್ತಾರೆ ; ಕೋಸಿ ಕಾಯು' (ಮಹಿಳೆಯರನ್ನು ಕಂಡರೆ ಹೊರುವ) ಪುರುಷರ ಕ್ಲಬ್ಬುಗಳು ಕೂಡ ಇವೆ.

ನಮಗೆ ಮಕ್ಕಳನ್ನು ಹೆರುವ ಸ್ಥಾನ ಮಾತ್ರವಲ್ಲದೆ ಜೊತೆಗಾರರ ಸ್ಥಾನವೂ ಬೇಕು. ಎಂದು ಪಾರ್ಲಿಮೆಂಟಿನ ಸದಸ್ಯೆಯೊಬ್ಬಳು ಹೇಳಿದಳು ಮನೆ ಯ ಜವಾಬ್ದಾರನ್ನು, ಬರೀ ಗಂಡಸರ ಜೊತೆಯಲ್ಲಿ, ಹೆಚ್ಚು ಹಣ ವ್ಯಯದ ವೇಶ್ಯಾ ನರ್ತನ ಪಾರ್ಟಿಯಲ್ಲಿದ್ದು, ರಾತ್ರೆ ಬಹಳ ಹೊತ್ತಾದ ಮೇಲೆ ಅವರು ಬರುವವರೆಗೆ, ಮನೆಯಲ್ಲೇ ಕೂತು ಮಕ್ಕಳನ್ನು ನೋಡಿಕೊಂಡಿದ್ದು ಅಳಿಸುತ್ತಾ, ತೂಕಡಿಸುತ್ತಾ, ಗಂಟೆನೋಡುತ್ತಾ, ಕೂತಿರುವುದನ್ನು ಬಯಸದ ನಾವು ಸಮಾಜಗಳಲ್ಲಿ ವಾಣಿಜ್ಯ ವ್ಯಾಪಾರಂಗಳಲ್ಲಿ ಭಾಗಿಗಳಾಗಲು ಕೇಳುತ್ತೇವೆ, ಎಂದೂ ಅಳೆಯು ಹೇಳಿರುವಳು ; ಜೀವನ ದಲ್ಲಿ ಅತಿ ದುಃಖಕರವೆಂದರೆ, ಸ್ತ್ರೀಯಾಗಿ ಹುಟ್ಟುವುದು, ಎಂಬ ನಾಣ್ನುಡಿಯನ್ನು ಅವರು ಅಲ್ಲಗಳೆಯುವರು : ಪುನರ್ಜನ್ಮದಲ್ಲಿ ನೀವು ಹೆಂಗಸಾಗಲು ಬಯಸುವಿರಾ ಅಥವಾ ಗಂಡಸಾಗಲು ಬಯಸುವಿರಾ ? ಎಂದು ಮತ ಗಣನೆ ನಡೆಸಲು, ಪ್ರತಿ 7 ಮಂದಿ ಸ್ತ್ರೀಯರಲ್ಲಿ 3 ಮಂದಿ ಸ್ವಲ್ಪವೂ ಅಸು ಮಾನವಿಲ್ಲದೆ ಹೆಂಗಸಾಗಿಯೇ ಹುಟ್ಟಲು ಬಯಸುವುದಾಗಿ ತಿಳಿಸಿದರು

ಪ್ರವಾಸ, ವಿದೇಶಗಳ ಪ್ರವಾಸ ಮಾಡಬೇಕೆಂದು ಅನೇಕ ಜಪಾನೀ ಸ್ತ್ರೀಯರ ಅಕಾಂಕ್ಷೆಯಾಗಿದೆ : 10 ಸಾವಿರ ಬೆಳ್ಳಿ (ಅಲ್ಲಿಯ ನಾಣ್ಯ) ಸ್ನನ್ನು 50 ಭಾವಿಯಕ್ಕೆ ಹೆಚ್ಚಿಸಬೇಕೆಂದು ಬಯಸುವವರೂ ಇದ್ದಾರೆ ; ಬಹು ನಾಗರೀಕವಾಗಿ ಬಟ್ಟೆ ಧರಿಸಬೇಕೆಂದೂ, ರೂಪು ಲಾವಣ್ಯದ ಕಡೆ ಹೆಚ್ಚು ಲಕ್ಷ್ಯ ಕೊಡಬೇಕೆಂದೂ ಕೆಲವರ ಅಭಿಮತ ; ಈಗಿರುವ ಉತ್ಪತ್ತಿಗಿಂತ ಇನ್ನೂ ಹೆಚ್ಚಬೇಕೆಂದು ಎಲ್ಲರ ಆಶೆಯಾಗಿದೆ.

★

ಈ ಸೋಜಿಗ ನೋಡಿ

ಎಲ್ಲ ದೇಶಗಳಲ್ಲಿಯೂ 1962 ನೇ ವರ್ಷ ಪ್ರವೇಶಿಸಿಲ್ಲ : ಇರಾಕು ಮತ್ತು ಅವಾಸ್ತವಿಸ್ಥಾನಗಳಲ್ಲಿ 1379 ನೇ ವರ್ಷವು 1959 ನೇ ಜುಲೈ 7 ರಂದು ಪ್ರಾರಂಭವಾಯಿತು. ಅದೇ ಕಾಲದಲ್ಲಿ ಇತೋಪಿಯಾದಲ್ಲಿ 1953 ನೇ ಆಗಸ್ಟ್ 12, ಜವಾನಿನಲ್ಲಿ ಚಕ್ರವರ್ತಿ ಮನೆತನದ ಯುಗದ 2619 ನೇ ವರ್ಷವೂ ಆಗಿತ್ತು.

Help The 'Gorakshana'

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಸಂರಕ್ಷಣೆ, ವ್ಯಾಪಾರದಲ್ಲಿ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣಾ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ಜಾಹೀರಾತುಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ವುಡ್'ಲ್ಯಾಂಡ್ಸ್ ಸ್ತುತ್ಯಾರ್ಹ 10 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಜಯಪ್ರದ 4 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್

ಸಾರಂಗಪಾಣಿ, ಎಂ ವಿ ರಾಜಮ್ಮ, ಸಂಧ್ಯ, ಮುತ್ತುಲಕ್ಷ್ಮಿ

[ದಿನವಹಿ 3 ಆಟಗಳು]

SHAKTI SUDHA

A Superb Tonic

ಅಮೇರಿಕಾದಲ್ಲಿ ಕುರುಡರಿಗೆ ಏರ್ಪಡಿಸಿರುವ ಕಾರ್ಯಕ್ರಮ ತಿಳಿಸುವ ದೃಶ್ಯಗಳು

Edited, Printed & Published by the Proprietor, Dharma Prachara Nirata M. S. Krishna Rao, at the Lakshmi Vilas Press Chamarajapuram, Mysore 4.